# ಕೊಬ್ಬರಿಯಲ್ಲಿ ಅರಳಿದ ಕಲೆ

ನಿಶ್ಚಿತಾರ್ಥ ಕಾರ್ಯಕ್ರಮದಲ್ಲಿ ಪಾಲ್ಗೊಂಡಾಗ ಗಂಡಿನ ಕಡೆಯವರು ತಂದ ಪರಿಕರಗಳಲ್ಲಿ ಕೊಬ್ಬರಿಯಲ್ಲಿ ಅರಳಿದ ದೇವರ ಚಿತ್ರಗಳು ಗಮನ ಸೆಳೆದವು. ಕರಾವಳಿ ಭಾಗದಲ್ಲಿ ನಡೆದ ನಿಶ್ಚಿತಾರ್ಥ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಮಲೆನಾಡು ಶಿವಮೊಗ್ಗ ಭಾಗದ ಹುಡುಗನ ಕಡೆಯವರು ಕೊಬ್ಬರಿಯ ಮೇಲೆ ಲಕ್ಷ್ಮೀ, ಗಣಪತಿ ಸೇರಿದಂತೆ ವಿವಿಧ ದೇವರ ಚಿತ್ರ ಬಿಡಿಸಿ ತಂದಿದ್ದರು. ತಾಂಬೂಲ ಬದಲಾವಣೆಯ ವೇಳೆ ಕೊಬ್ಬರಿಯಲ್ಲಿ ಅರಳಿದ ದೇವರ ಚಿತ್ರಗಳು ಕಲಾವಿದನ ಸೃಜನಶೀಲತೆಗೆ ಸಾಕ್ಷಿ ಎನಿಸಿತು. ಮದುವೆಯ ಬಂಧದಲ್ಲಿ ಸಂಸ್ಕೃತಿ, ಸಂಪ್ರದಾಯಗಳ ಪಾತ್ರ ದೊಡ್ಡದು. ಇದರ ಜೊತೆಗೆ ಹಾಸು ಹೊಕ್ಕ ಕಲಾತ್ಮಕ ಸೃಜನಶೀಲತೆ ಮೈದೂಗುವಂತೆ ಮಾಡಿತು.

—ಅರುಣ್ ಕಿಲ್ಲೂರು



# ಒಂದು ಎಳೆ, ಒಂಬತ್ತು ಬದನೆ

ಒಂದೇ ಎಳೆಯಲ್ಲಿ 9 ಬದನೆಕಾಯಿಗಳು ಬಿಡುವುದು ಎಲ್ಲಾದರೂ ಸಾಧ್ಯವೇ? ಸಾಧ್ಯ ಎನ್ನುತ್ತಿದ್ದಾರೆ ನಿವೃತ್ತ ಪೊಲೀಸ್ ಅಧಿಕಾರಿ ವೀರಭದ್ರ ನೀಲನ್ನವರ ಅವರು. ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲ್ಲೂಕಿನ ಮೂಡಲಗಿ ಸಮೀಪದ ಬೆಟಗೇರಿ ಗ್ರಾಮದಲ್ಲಿ ಈ ಅಚ್ಚರಿ ನಡೆದಿದ್ದು, ವೀರಭದ್ರ ಅವರ ತೋಟದಲ್ಲಿ ಬೆಳೆದ ಬದನೆ ಗಿಡವೊಂದರಲ್ಲಿ ಒಂದೇ ಎಸಳಿನಲ್ಲಿ 9 ಬದನೆಕಾಯಿಗಳನ್ನು ಬಿಡುವ ಮೂಲಕ ಅಚ್ಚರಿ ಮೂಡಿಸಿದೆ.

—ಬಿ.ಎಸ್. ಮುಳ್ಳೂರ, ಹಲಗತ್ತಿ ರಾಮದುರ್ಗ






# ಕನ್ನಡ ಪುಸ್ತಕದ ಗೂಡು

'ಗೃಹಪ್ರವೇಶ'ದ ಆಹ್ವಾನ ಪತ್ರಿಕೆಯಲ್ಲಿದ್ದ ಒಕ್ಕಣೆ ಗಮನ ಸೆಳೆಯಿತು. ಅದು ಹೀಗಿದೆ... 'ನೀವು ಈಗಾಗಲೇ ಓದಿ ಮುಗಿಸಿರುವ ಒಂದು ಕನ್ನಡ ಪುಸ್ತಕವನ್ನು ತನ್ನಿ. ಈ ಪುಸ್ತಕ ಗೂಡು ನಿಮಗಾಗಿ ಕಾಯುತ್ತಿರುತ್ತದೆ'.

ಆಹ್ವಾನದ ಮೇರೆಗೆ ನಾನಲ್ಲಿಗೆ ಹೋದಾಗ 'ಪುಸ್ತಕ ಗೂಡು' ನನ್ನನ್ನು ಸ್ವಾಗತಿಸಿತು. ನಾನು 5 ಪುಸ್ತಕ ಕೊಂಡೊಯ್ದಿದ್ದೆ! ಆಗಲೇ ಅಲ್ಲಿ ಹಲವಾರು ಪುಸ್ತಕಗಳ ವಿನಿಮಯವಾಗಿತ್ತು. ಪುಸ್ತಕ ಗೂಡಿನಲ್ಲಿ, 'ನಿಮಗಿಷ್ಟದ ಪುಸ್ತಕವನ್ನು ತೆಗೆದುಕೊಳ್ಳಬಹುದು. ನೀವು ಈಗಾಗಲೇ ಓದಿದ ಕನ್ನಡ ಪುಸ್ತಕಗಳು ನಿಮ್ಮಲ್ಲಿದ್ದರೆ ಇಲ್ಲಿ ಇಡಬಹುದು. ಗೃಹ ಪ್ರವೇಶಕ್ಕೆ ಬಂದು ಹಾರೈಸಿದ ತಮಗೆ ಧನ್ಯವಾದಗಳು' ಎನ್ನುವ ಒಕ್ಕಣೆ ಮನದ ಕದತಟ್ಟಿತು.

ಇದು ನಡೆದಿದ್ದು ಶಿವಮೊಗ್ಗದ ಕೆನರಾ ಬ್ಯಾಂಕ್ ಉದ್ಯೋಗಿ ರಾಜೇಂದ್ರ ಪೈ ರವರ ಗೃಹಪ್ರವೇಶ ಕಾರ್ಯಕ್ರಮದಲ್ಲಿ. ಇವರು ಬ್ಯಾಂಕ್ ಉದ್ಯೋಗಿಯಾಗಿದ್ದು, ವೃತ್ತಿಯ ಜೊತೆ ಜೊತೆಗೆ ಕನ್ನಡ ಕಟ್ಟುವ ಕೆಲಸವನ್ನೂ ಮಾಡುತ್ತಿದ್ದಾರೆ. ಬ್ಯಾಂಕಿಂಗ್ ಕನ್ನಡಿಗರ ಕೂಟ ರಚಿಸಿ ವರ್ಷಕ್ಕೊಮ್ಮೆ ಕಾರ್ಯಕ್ರಮ ಆಯೋಜಿಸಿ, ಎಲ್ಲರ ಒಳಗೊಳ್ಳುವಿಕೆಗೆ ಹಲವಾರು ವರ್ಷದಿಂದ ಕಾರಣರಾಗಿದ್ದಾರೆ.

ಉದ್ಯೋಗಕ್ಕಾಗಿ ಕನ್ನಡಿಗರು ಬ್ಯಾಂಕಿಂಗ್ ಪರೀಕ್ಷೆ ತೆಗೆದುಕೊಳ್ಳಲು ಪ್ರೇರೇಪಿಸುತ್ತಿರುವ ಇವರು, ಅದಕ್ಕಾಗಿ ಉಚಿತ ತರಬೇತಿ ವ್ಯವಸ್ಥೆ ಮಾಡಿದ್ದಾರೆ. ಅಂದು ಕಾರ್ಯಕ್ರಮಕ್ಕೆ ಬಂದ ಹಲವರ ಕೈಯಲ್ಲಿ ಪುಸ್ತಕ ಕಂಡಿದ್ದು, ಅವುಗಳನ್ನು ಗೂಡಿನಲ್ಲಿಟ್ಟು ಬದಲಿ ಪುಸ್ತಕ ತೆಗೆದುಕೊಂಡು ಹೋಗಿದ್ದು ಖುಷಿ ಕೊಟ್ಟಿತು. ಅವರ ಹೊಸ ಮನೆಯ ಕಾಂಪೌಂಡ್ ಗೋಡೆಯ ಫಲಕವೂ ಗಮನ ಸೆಳೆಯಿತು.

—ಪೂರ್ಣಿಮಾ ಹೆಚ್.ಎನ್., ಹೊಸನಗರ

